RNU AIR DHARWAD

JULY 15, 2025

## AKASHAVANI - DHARWAD
## PRADESH SAMACHARA (KANNADA) 12.00 P.M.

**1. ಕನ್ನಡ ಭಾಷೆಯ, ಹಿರಿಯ ಚಲನಚಿತ್ರ ನಟಿ,** ಬಿ. ಸರೋಜಾದೇವಿ ಅವರು, ಭಾರತೀಯ ಸಿನೆಮಾ ಮತ್ತು ಸಂಸ್ಕೃತಿಯ ಅನುಕರಣೀಯ ಮಾದರಿ. ಅವರ ನಟನೆ, ವಿವಿಧ ತಲೆಮಾರುಗಳ ಜನ ಮಾನಸದಲ್ಲಿ, ಅಚ್ಚಳಿಯದೇ ಬೇರೂರಿದೆ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ, ಶ್ಲಾಘಿಸಿ, ಕಂಬನಿ ಮಿಡಿದಿದ್ದಾರೆ. ಬಹುಭಾಷಾ ನಟಿ, ಬಿ. ಸರೋಜಾದೇವಿ ಅವರ, ಬೆಂಗಳೂರಿನ ಮಲ್ಲೇಶ್ವರಂ ನಿವಾಸದಲ್ಲಿ, ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದ, ಮುಖ್ಯಮಂತ್ರಿ ಸಿದ್ದರಾಮಯ್ಯ, ಗೌರವ ನಮನ ಸಲ್ಲಿಸಿದರು.

<><><>

**ಇಂದು ಮಧ್ಯಾಹ್ನ 3 ಗಂಟೆಗೆ,** ಚನ್ನಪಟ್ಟಣ ತಾಲೂಕು, ದಶಾವರದಲ್ಲಿ ಅವರ ಪುತ್ರ ಗೌತಮ್, ಒಕ್ಕಲಿಗ ಸಂಪ್ರದಾಯದಂತೆ, ಪಾರ್ಥಿವ ಶರೀರದ ಅಂತ್ಯಕ್ರಿಯೆ, ನೆರವೇರಿಸಲಿದ್ದಾರೆ. ಸಕಲ ಸರ್ಕಾರಿ ಗೌರವಗಳೊಂದಿಗೆ, ಅಂತ್ಯ ಸಂಸ್ಕಾರಕ್ಕೆ ಬೆಂಗಳೂರು ದಕ್ಷಿಣ ಜಿಲ್ಲಾಡಳಿತ, ವ್ಯವಸ್ಥೆ ಮಾಡಿದೆ.

<><><>

**2. ಇಂದು, ವಿಶ್ವ ಯುವ ಕೌಶಲಗಳ ದಿನದ, ದಶಮಾನೋತ್ಸವ.** 'ಕೃತಕ ಬುದ್ಧಿಮತ್ತೆ ಹಾಗೂ ಡಿಜಿಟಲ್ ಕೌಶಲಗಳ ಮೂಲಕ, ಯುವ ಸಬಲೀಕರಣ', ಎಂಬ ಧ್ಯೇಯದೊಂದಿಗೆ, ಯುವ ಕೌಶಲ ದಿನ, ಆಚರಿಸಲಾಗುತ್ತಿದೆ. ವಿಶ್ವ ಯುವ ಕೌಶಲ ದಿನದಂದು, ನಾಡಿನ ಯುವ ಜನತೆಯ ಕೌಶಲಾಭಿವೃದ್ಧಿಗೆ ಮತ್ತು ನೆಮ್ಮದಿಯ ಉಪಜೀವನಕ್ಕೆ, ಸ್ವ ್ತತೆಯೊಂದಿಗೆ, ಒಟ್ಟಾಗಿ ಕಾರ್ಯ ನಿರ್ವಹಿಸೋಣ ಎಂದು, ಕೌಲಾಭಿವೃದ್ಧಿ ಖಾತೆ ಸಚಿವ ಶರಣಪ್ರಕಾಶ ಪಾಟೀಲ ಆಶಯ ವ್ಯಕ್ತ ಪಡಿಸಿದ್ದಾರೆ.

<><><>

**3. ಬಾಲ್ಯ ವಿವಾಹ,** ಬಾಲ ಗರ್ಭಿಣಿ, ಪೋಕ್ಸೋ ಪ್ರಕರಣಗಳ ಕುರಿತ ಜಾಗೃತಿ ಕಾರ್ಯಕ್ರಮಕ್ಕೆ, ಧಾರವಾಡ ಜಿಲ್ಲಾಧಿಕಾರಿ ದಿವ್ಯಾ ಪ್ರಭು, ಈಗಷ್ಟೇ ಚಾಲನೆ ನೀಡಿದರು.

<><><>

**4. ಭಾರತೀಯ ಗಗನಯಾತ್ರಿ, ಗ್ರೂಪ್** ಕ್ಯಾಪ್ಟನ್ ಶುಭಾಂಶು ಶುಕ್ಲಾ ಹಾಗೂ ಆಕ್ಸಿಯಮ್–4 ಮಿ ್ನ್ನ, ಮೂವರು ಗಗನಯಾತ್ರಿಗಳು ಇಂದು, ಮಧ್ಯಾಹ್ನ 3 ಗಂಟೆಗೆ, ಭೂಮಿಗೆ ಮರಳಲಿದ್ದಾರೆ ಎಂದು, ನಿರೀಕ್ಷಿಸಲಾಗಿದೆ.

<><><>

**5. ಕ್ರಾಂತಿವೀರ ಸಿಂಧೂರ ಲಕ್ಷ್ಮಣ** ಅವರ ಪುಣ್ಯ ಸ್ಮರಣೆ ಇಂದು. ಹುಬ್ಬಳ್ಳಿಯ ರಾಮಲಿಂಗೇಶ್ವರ ನಗರದಲ್ಲಿರುವ ಪ್ರತಿಮೆಗೆ, ಮಹಾಪೌರರಾದ ಜ್ಯೋತಿ ಪಾಟೀಲ, ಗೌರವಾರ್ಪಿಸಿದರು.

<><><>

**6. ಆತ್ಮ ನಿರ್ಭರ ಭಾರತ;** ಪ್ರಧಾನಮಂತ್ರಿಗಳ, ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ, ನಿಯಮಬದ್ಧಗೊಳಿಸುವಿಕೆ ಯೋಜನೆ ಅಡಿ, ಧಾರವಾಡ ಜಿಲ್ಲೆಯಲ್ಲಿ, 20 ಜನ, ಪಿ.ಎಂ./ಎಫ್.ಎಂ.ಇ ಯೋಜನೆಯ, ಸಂಪನ್ಮೂಲ ವ್ಯಕ್ತಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ, ಪಿ.ಎಂ./ಎಫ್.ಎಂ.ಇ ಯೋಜನೆಯ, ಸಂಪನ್ಮೂಲ ವ್ಯಕ್ತಿ, ಶಿಲ್ಪಾ ಕೊಪ್ಪದ.

<><><>

**7. ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ** ಬ್ಯಾಂಕ್, ನಬಾರ್ಡ್ ನ 44ನೇ ಸಂಸ್ಥಾಪನಾ ದಿನಾಚರಣೆ, ಬೆಂಗಳೂರಿನ ನಬಾರ್ಡ್ ಪ್ರಾದೇಶಿಕ ಕಚೇರಿಯಲ್ಲಿ, ಇದೀಗ ಆರಂಭವಾಗಿದೆ.

<><><>

**8. ರಾಜ್ಯ ಸರ್ಕಾರ, ಕಾಡಂಚಿನ ಜನರಿಗೆ** ವಯಕ್ತಿಕ ಹಕ್ಕುಪತ್ರ ಮಂಜೂರು ಮಾಡಿದ್ದು, ಚಾಮರಾಜನಗರ ಜಿಲ್ಲೆಯ, ಬುಡಕಟ್ಟು ಜನ, ಕಾಫಿ, ಮೆಣಸು ಸೇರಿದಂತೆ, ವಾಣಿಜ್ಯ ಬೆಳೆ ಆಶ್ರಯಿಸಿ, ಜೀವನೋಪಾಯ ಕಂಡುಕೊಂಡಿದ್ದಾರೆ ಎಂದು, ಕೃಷಿ ಇಲಾಖೆ ಜಿಲ್ಲಾ ಉಪ ನಿರ್ದೇಶಕರಾದ ಸುಷ್ಮಾ ತಿಳಿಸಿದ್ದಾರೆ. ಚಾಮರಾಜನಗರ ಜಿಲ್ಲೆಯಲ್ಲಿ, 158 ಕ್ಕೂ ಹೆಚ್ಚು ಬುಡಕಟ್ಟು

ಕಾಲೋನಿಗಳಿವೆ. ಬಿಳಿಗಿರಿ ರಂಗನ ಬೆಟ್ಟದ ಸೋಲಿಗರು, ಈ ಹಿಂದೆ, ರಾಗಿ, ಜೋಳ, ಸೇರಿದಂತೆ ಸಿರಿಧಾನ್ಯಗಳನ್ನು ಬೆಳೆಯುತ್ತಿದ್ದರು. ಪ್ರಸ್ತುತ ಕಾಫಿ, ಮೆಣಸು, ಅರಿಷಿಣ ಬೆಳೆಯುತ್ತಿದ್ದಾರೆ, ಎಂದರು.

<><><>

**9. ಗದಗ ಜಿಲ್ಲೆ, ಗ್ರಾಮೀಣ** ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮಾದಕ ದ್ರವ್ಯ ಮಾರುತ್ತಿದ್ದ ಆರೋಪದ ಮೇಲೆ, ಆರು ಜನರನ್ನು ಬಂಧಿಸಿ, 6 ದಶಾಂಶ 7–0 ಕಿಲೋ ಗ್ರಾಂ ತೂಕದ, ಗಾಂಜಾ ವಶ ಪಡಿಸಿಕೊಳ್ಳಲಾಗಿದೆ ಎಂದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ ತಿಳಿಸಿದ್ದಾರೆ.

<><><>

**10. 'ರಾ.ಯ ಧಾರವಾಡಕರ ಅವರ,** ಹೊಸಗನ್ನಡ ಸಾಹಿತ್ಯದ ಉದಯಕಾಲ' ವಿಷಯ ಕುರಿತು, ಧಾರವಾಡ, ಕರ್ನಾಟಕ ವಿದ್ಯಾವರ್ಧಕ ಸಂಘದ, ರಾ.ಹ ದೇಶಪಾಂಡೆ ಸಭಾಭವನದಲ್ಲಿ, ಇಂದು ಸಂಜೆ 6 ಗಂಟೆಗೆ, ವಿಶೇಷ ದತ್ತಿ ಉಪನ್ಯಾಸ ಕಾರ್ಯಕ್ರಮ ಜರುಗಲಿದೆ.

<><><>

**11. ಸಿ.ಜಿ ಕೃಷ್ಣಸ್ವಾಮಿ ಸಂಸ್ಮರಣೆ,** ರಂಗ ದಿನಾಚರಣೆ ಅಂಗವಾಗಿ, ಕೊಪ್ಪಳ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ, ಸಿ.ಜಿ.ಕೆ. ರಂಗ ಪುರಸ್ಕಾರಗಳನ್ನು, ರಾಜ್ಯ ನಾಟಕ ಅಕಾದೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ಸಾಧಕ ಗಣ್ಯರಿಗೆ, ಪ್ರದಾನ ಮಾಡಿ, ಗೌರವಿಸಿದರು. ಉಪ ಕುಲಪತಿ ಬಿ.ಕೆ. ರವಿ ಹಾಗೂ ಗಣ್ಯರು ಪಾಲ್ಗೊಂಡಿದ್ದರು.

<><><>

**12. ಧಾರವಾಡ, ಕೃಷಿ ವಿಜ್ಞಾನಗಳ** ವಿದ್ಯಾಲಯ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಉನ್ನತ ಕೃಷಿ ತಂತ್ರಜ್ಞಾನಗಳ ಬಳಕೆ ಉತ್ತೇಜಿಸಲು, ಒಡಂಬಡಿಕೆಗೆ ಸಹಿ ಹಾಕಿವೆ. ರೈತರಿಗೆ ಕಾರ್ಯಾಗಾರ, ಹಣಕಾಸು ಯೋಜನೆ ಶಿಬಿರ ಸೇರಿದಂತೆ, ಕೃಷಿ ತಂತ್ರಜ್ಞಾನ ಮಾಹಿತಿ ವಿನಿಮಯಕ್ಕೆ ಸಹಕಾರಿಯಾಗಲಿದೆ ಎಂದು, ಕೃಷಿ ವಿಶ್ವವಿದ್ಯಾಲಯ, ತಿಳಿಸಿದೆ.

<><><>